ಮಾತುಗಳನ್ನು ಕೇಳಿದ ಅಪ್ಪನ ಮುಖದಲ್ಲಾದ ಬದಲಾವಣೆಯನ್ನು ಈ ಮಗ ಗಮನಿಸಲಿಲ್ಲ. ಆದರೆ, ಇವರಿಬ್ಬರ ಮಾತುಕತೆಗಳನ್ನೇ ಕೇಳಿಸಿಕೊಳ್ಳುತ್ತಿದ್ದ ಅಮ್ಮ ಮಾತ್ರ ಥಟ್ಟನೆ ಗಮನಿಸಿದ್ದಳು ಮತ್ತು ಗಡಿಬಿಡಿಗೊಂಡಿದ್ದಳು. ತಾಯಿಯ ಗಡಿಬಿಡಿಯನ್ನು ನೋಡಿದ ಮಗ 'ಏನಮ್ಮ ಏನಾಯ್ತು' ಎಂದು ಆಕೆಯನ್ನು ಕೇಳುತ್ತಿದ್ದಂತೆಯೇ ಇನ್ನೂ ತೀರಾ ಅಸ್ವಸ್ಥ ಸ್ಥಿತಿಯಲ್ಲಿಯೇ ಇದ್ದ ಅಪ್ಪ ಅಲ್ಲಿಂದೆದ್ದು ಹೋಗಿದ್ದರು ಮತ್ತು ಅಮ್ಮ ನಿಧಾನವಾಗಿ ತನ್ನ ಮಾಮೂಲಿ ಸ್ಥಿತಿಗೆ ಮರಳುವ ಪ್ರಯತ್ನ ಮಾಡಿದ್ದಳು. ಎಂದೂ ಕಂಡಿರದ ಅಪ್ಪನ ಈ ಸ್ಥಿತಿ ಈ ಮಗನಲ್ಲಿ ತುಸು ಗೊಂದಲವನ್ನೇ ಹುಟ್ಟಿಸಿತ್ತು. 'ಅಪ್ಪ ಅಷ್ಟೊಂದು ವಿಶ್ವಾಸವನ್ನಿಟ್ಟು ಕೊಂಡಿದ್ದರೇ ಆ ಮಗನಲ್ಲಿ?' ಬಗೆ ಹರಿಯಲಿಲ್ಲ ಇವನ ಸಂಶಯ. ತನ್ನ ಗಡಿಬಿಡಿಯಿಂದ ಇನ್ನೂ ಶಾಂತ ಸ್ಥಿತಿಗೆ ನಿಧಾನವಾಗಿ ಮರಳುತ್ತಿದ್ದ ಅಮ್ಮನನ್ನೂ ಕೇಳಲು ಮನಸ್ಸಾಗಲಿಲ್ಲ ಇವನಿಗೆ. ಹಾಗೆಯೇ ಸುಮ್ಮನಾಗಿ ಬಿಟ್ಟ.

ಹಾಗೆ ತಾಯಿ ಮಗ ಸುಮ್ಮನೇ ಮಾತನಾಡದೆ ಮುಖ ಮುಖ ನೋಡುತ್ತ ನಿಂತಿರುವಾಗಲೇ ಅವರಿಗೆ ಕಿರುಚಿದ ಶಬ್ದ ಕೇಳಿಸಿತು. 'ಅಪ್ಪನದ್ದಲ್ಲವೇ ಆ ಧ್ವನಿ...' ಮಗ ಕೇಳಿದ. ಇನ್ನೂ ಗೊಂದಲದಿಂದ ಹೊರಬರಲು ಪ್ರಯತ್ನಿಸುತ್ತಿದ್ದ ಆ ಅಮ್ಮನಿಂದ ಉತ್ತರವೇ ಇಲ್ಲ. ಅದಕ್ಕಾಗಿ ಕಾಯುವಷ್ಟು ವ್ಯವಧಾನವಿಲ್ಲದ ಮಗ ಹೊರಗೆ ಓಡಿದ್ದ. ನೋಡಿದರೆ ಅಪ್ಪ ಮೆಟ್ಟಲಿನಿಂದ ಜಾರಿ ಕೆಳಗೆ ಬಿದ್ದಿದ್ದರು ಮತ್ತು ಬಿದ್ದವರ ತಲೆ ಪಕ್ಕದಲ್ಲಿನ ದಂಡೆಗೆ ತಗುಲಿತ್ತು. ಬಿದ್ದವರು ಏಳುವ ಪ್ರಯತ್ನ ಮಾಡುತ್ತಿರುವುದು ಕಾಣಿಸುತ್ತಿತ್ತು. ನೋಡಿದ ಇವ ಒಂದೇ ಹಾರಿಗೆ ಅಪ್ಪ ಬಿದ್ದ ಜಾಗವನ್ನು ತಲುಪಿದವ, 'ಅಮ್ಮಾ ಬಾ ಇಲ್ಲಿ...' ಎಂದು ಜೋರಾಗಿ ಕಿರುಚಿದ್ದ.

ಇವನ ಕೂಗನ್ನು ಕೇಳಿ ಹೊರಬಂದ ಅಮ್ಮನಿಗೆ ಕಾಣಿಸಿದ್ದು ಕಾಲು ನೀಡಿ ಕುಳಿತು ಅಪ್ಪನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಅವರ ಕಿವಿಯಿಂದ ಸೋರುತ್ತಿದ್ದ ರಕ್ತವನ್ನು ಒರೆಸುತ್ತಿದ್ದ ಮಗ, 'ಅಪ್ಪನನ್ನು ಕೂಡಲೇ ಯಾವುದಾದರೂ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು'.



'ಹೌದು... ಹೌದು...' ಎನ್ನುತ್ತಲೇ ಓಡುತ್ತ ಬಂದ ಆಕೆ ಕುಳಿತುಕೊಂಡು ಗಂಡನನ್ನು ತನ್ನ ಕಾಲಿನ ಮೇಲೆ ತೆಗೆದುಕೊಳ್ಳುತ್ತ ಮಗನನ್ನು ಆಟೊ ತರಲು ಓಡಿಸಿದ್ದಳು.

ತಾಯಿ ಮಗ ಇಬ್ಬರೂ ಸೇರಿ ಅವರನ್ನು ಆಟೊದಲ್ಲಿ ಕೂರಿಸಿಕೊಂಡು ನಾಲ್ಕೈದು ಕಿಲೋ ಮೀಟರ್ ದೂರದ ಆಸ್ಪತ್ರೆಗೆ ಕೊಂಡೊಯ್ದರೆ ನೋಡಿದ ಡಾಕ್ಟರು ಹೇಳಿದ್ದರು, 'ಗಂಭೀರವಾದ ಪೆಟ್ಟು ಬಿದ್ದಿದೆ. ತಲೆಯೊಳಗೂ ಏಟು ತಗಲಿದ ಹಾಗೆ ಕಾಣಿಸುತ್ತಿದೆ. ಏನಾದರೂ ಇರಲಿ, ಕೂಡಲೇ ಅಡ್ಮಿಟ್ ಮಾಡಿಸಿ ನೋಡೋಣ' ಎಂದಿದ್ದರು. ಹಾಗೆ ಅಡ್ಮಿಟ್ ಆದವರನ್ನು 'ತಲೆಗೆ ಬಿದ್ದ ಏಟಿನಿಂದಾಗಿ ಪ್ಯಾರಲಿಸಿಸ್ ಬಂದಿದೆ' ಎಂದ ಡಾಕ್ಟರು ಅವರನ್ನು ಆಸ್ಪತ್ರೆಯಲ್ಲಿಯೇ ಉಳಿಸಿಕೊಂಡಿದ್ದರು. ದೈಹಿಕ ಪೆಟ್ಟಿಗಿಂತ ಮಾನಸಿಕ ನೋವೇ ಅವರನ್ನು ಈ ಪರಿಸ್ಥಿತಿಗೆ ತಳ್ಳಿದ್ದು ಎಂದು ಈ ಮಗನ ಒಳ ಮನಸ್ಸು ಹೇಳುತ್ತಲೇ ಇತ್ತು.

ಅದೇ ಆಲೋಚನೆಯಲ್ಲಿ ತಮ್ಮನಿಗೆ ಫೋನ್ ಮಾಡಿದ್ದ. ಅಪ್ಪನ ಸ್ಥಿತಿ ಗಂಭೀರವಾಗಿದೆಯೆಂದೂ ಅಡ್ಮಿಟ್ ಮಾಡಿದ ಆಸ್ಪತ್ರೆಯ ಡಾಕ್ಟರುಗಳು ಯಾವ